**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/175/ಎಂಎಸ್‌ಸಿ/2017/2231

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು–560001,
ದಿನಾಂಕ16-11-2018

**ಸುತ್ತೋಲೆ**

ವಿಷಯ: ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ 2017ನೇ ಸಾಲಿನ ಸಾಂಕೇತಿಕ ಮತ್ತು ವಾಹನ ಧ್ವಜಗಳ ವಿತರಣೆ ಬಗ್ಗೆ.

ಉಲ್ಲೇಖ: ೧. ಕಾರ್ಯದರ್ಶಿಗಳು, ಸಶಸ್ತ್ರಪಡೆಗಳ ರಾಜ್ಯಸ್ಥಾಯಿ ಸಲಹಾ ಸಮಿತಿ ಮತ್ತು ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು,ಇವರ ಪತ್ರ ಸಂ: ಸೈಕಪುಇ/ಧ್ವಜದಿ/3/ಡಿಎಲ್‌ಎ/2017(ಅ) ದಿ:04-12-2017

೨. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಡಿಟಿಇ /175/ ಎಂಎಸ್‌ಸಿ /2017 ದಿ:22.02.2018

೩. ಶ್ರೀ ಉಮೇಶ್ ಕುಮಾರ್, ಸರ್ಕಾರದ ಕಾರ್ಯದರ್ಶಿ ಕರ್ನಾಟಕ ಸರ್ಕಾರದ ಸಚಿವಾಲಯದ ಒಳಾಡಳಿತ ಇಲಾಖೆ ಇವರ, ಅರೆ ಸರ್ಕಾರಿ ಪತ್ರ ಸಂಖ್ಯೆ ಒಇ /112/ ಕ.ಸೈ.ಸೇ/2018 ದಿ:25.10.2017

* – * – * – *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ 1 ರ ಪತ್ರದಲ್ಲಿ ಕಾರ್ಯದರ್ಶಿಗಳು, ಸಶಸ್ತ್ರ ಪಡೆಗಳ ರಾಜ್ಯ ಸ್ಥಾಯಿ ಸಲಹಾ ಸಮಿತಿ ಮತ್ತು ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು, ಇವರು ಪ್ರತಿ ವರ್ಷದಂತೆ ಈ ವರ್ಷವೂ ಸಶಸ್ತ್ರ ಪಡೆಗಳ ದಿನಾಚರಣೆಯನ್ನು ದೇಶದಾದ್ಯಂತ ದಿನಾಂಕ: 07-12-2017 ರಂದು ಆಚರಿಸಲಾಗುತ್ತಿದ್ದು, ಧ್ವಜ ನಿಧಿಗೆ ಹಣವನ್ನು ಜನ ಸಾಮಾನ್ಯರಿಂದ, ವಿದ್ಯಾರ್ಥಿಗಳಿಂದ, ಸರ್ಕಾರಿ ನೌಕರರಿಂದ, ಶಿಕ್ಷಣ ಸಂಸ್ಥೆಗಳಿಂದ ಸಂಗ್ರಹಿಸುವ ಸಂಬಂಧ ಸಾಂಕೇತಿಕ ಧ್ವಜ ಹಾಗೂ ವಾಹನ ಧ್ವಜವನ್ನು ಮುಂದಿನ ಕ್ರಮಕ್ಕಾಗಿ ತಾಂತ್ರಿಕ ಶಿಕ್ಷಣ ಇಲಾಖೆಗೆ ಸರಬರಾಜು ಮಾಡಲಾಗಿದೆ.

ಈ ಸಂಬಂಧ ತಾಂತ್ರಿಕ ಶಿಕ್ಷಣ ಇಲಾಖೆಗೆ ಸರಬರಾಜು ಮಾಡಲಾಗಿರುವ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯ 2017ನೇ ಸಾಲಿನ ಸಾಂಕೇತಿಕ ಮತ್ತು ವಾಹನ ಧ್ವಜಗಳನ್ನು ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಿಗೆ ಉಲ್ಲೇಖ(2)ರ ಸುತ್ತೋಲೆಯಂತೆ ಹಂಚಿಕೆ ಮಾಡಿ, ಪ್ರಾಂಶುಪಾಲರು ತಮ್ಮ ವೈಯಕ್ತಿಕ ಗಮನಹರಿಸಿ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ 2017 ನೇ ಸಾಲಿನ ಸಾಂಕೇತಿಕ ಮತ್ತು ವಾಹನ ಧ್ವಜಗಳನ್ನು ಕಡ್ಡಾಯವಾಗಿ ಮಾರಾಟ ಮಾಡಿ, ಉದ್ದೇಶಿತ ಕಾರ್ಯ ಯಶಸ್ವಿಗೊಳ್ಳಲು ಸಹಕರಿಸಲು ಕೋರಲಾಗಿತ್ತು. ಆದರೆ ಉಲ್ಲೇಖ(3)ರ ಕರ್ನಾಟಕ ಸರ್ಕಾರದ ಸಚಿವಾಲಯದ ಒಳಾಡಳಿತ ಇಲಾಖೆ ಇವರ ಅರೆ ಸರ್ಕಾರಿ ಪತ್ರ ದಿ:25.10.2018ರಲ್ಲಿ ಇಲಾಖೆಯ ಅದೀನದಲ್ಲಿ ಬರುವ ಎಲ್ಲಾ ಸಂಸ್ಥೆಗಳು ನಿಗದಿತ ಗುರಿಯನ್ನು ಸಾದಿಸಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಕೂಡಲೇ ವಿಶೇಷ ಆಸಕ್ತಿ ವಹಿಸಿ ಉಲ್ಲೇಖ(2)ರಲ್ಲಿ ಸರಬರಾಜು ಮಾಡಿರುವ ಧ್ವಜ ನಿಧಿ ಸಂಗ್ರಹಣೆಯ ನಿಗದಿತ ಗುರಿಯನ್ನು ತಲುಪುವಂತೆ ಕೋರಿದೆ. ಈವರೆಗೂ ಮಾರಾಟ ಮಾಡಿ ಸಂಗ್ರಹಿಸಿದ ಮೊತ್ತ ಹಾಗೂ ಉಳಿದಿರುವ ಧ್ವಜಗಳನ್ನು ಕಡ್ಡಾಯವಾಗಿ ಮಾರಾಟ ಮಾಡಿ ಮೊತ್ತವನ್ನು ಸಂಬಂಧಿಸಿದ ಖಾತೆಗೆ ಜಮಾ ಮಾಡಿ ಸದರಿ ವಿವರಗಳನ್ನು ಕೂಡಲೇ ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಆಡಳಿತಾಧಿಕಾರಿ
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

1. ತಾಂತ್ರಿಕ ಶಿಕ್ಷಣ ಇಲಾಖೆಯ ಅದೀನದಲ್ಲಿನದ ಎಲ್ಲಾ ಸರ್ಕಾರಿ/ಅನುದಾನಿತ ಇಂಜನಿಯರಿಂಗ್ ಕಾಲೇಜುಗಳು ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರುಗಳ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.(ವೆಬ್ ಸೈಟ್‌ನಲ್ಲಿ ಪ್ರಕಟಿಸಲು.)

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಕರ್ನಾಟಕ ಸರ್ಕಾರದ ಸಚಿವಾಲಯದ ಒಳಾಡಳಿತ ಇಲಾಖೆ, ವಿಧಾನಸೌದ ಬೆಂಗಳೂರು.
2. ಕಾರ್ಯದರ್ಶಿಗಳು ಸಶಸ್ತ್ರಪಡೆಗಳ ರಾಜ್ಯ ಸ್ಥಾಯಿಸಲಹಾ ಸಮಿತಿ ಹಾಗೂ ನಿರ್ದೇಶಕರು ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆ, ನಂ.58, ಕಾರ್ಯಪ್ಪ ಭವನ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ರಸ್ತೆ, ಬೆಂಗಳೂರು-560 025.